R No KRNN 12

15-4-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸಂವೇರಿಸಿದ ಪತ್ರಿಕೆ

First Golden Jubilee Celebrated Paper in The State

** Now in 57th Year **

'Satyavadi' daily, Mysore 4

ಸತ್ಯವಾದಿ

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು ದಿವಂಗತ ಡಾಂಸಿರಿ ಎಂ. ಎಸ್. ಕೃಷ್ಣರಾವ್ | 3 ಪೈಸೆ

ಕೇಂದ್ರದ ಅಜ್ಜಿಗೆ ಕೇರಳದ ನಿರಾಕರಣೆ

ಗೋವು

★

ಸತ್ಯ ಶಾಂತಿಯ ಐಕ್ಯ ಬೋಧನ
ನಿತ್ಯ ಗೋವಿನ ಜೀವನ
ಮೂಕ ರೋಧನದಿಂದ ನಾಡಿನ
ಧರ್ಮ ಕಾರ್ಯ ಸಾಧನ ॥ 1 ॥

ಹುಲ್ಲ ಮೇಯುತ ಹಾಲನೀಯುವ
ಗೋವಿನ ಜೀವನ ಪಾವನ
ನಿತ್ಯ ಗೋವಿನ ಬಜಿಸುತಿರುವನ
ಗೃಹವೇ ಸುಂದರ ನಂದನ ॥ 2 ॥

ದೇಶವೆಲ್ಲಿಗೆ ಮಾಡಿವ ಗೋವೆ
ನಿಮಗೆ ಮಾರ್ಗದರ್ಶನ
ಸ್ವಾರ್ಥಜೀವನ ನಡೆಸುತಿರುವಗೆ
ತಾಯಿ ನೀಡುವ ಬೋಧನ ॥ 3 ॥

ರಕ್ತ ಸೋರುವ ತನಕ ಬಡಿವರು
ಕ್ಷೀರ ನೀಡುವ ಜೀವನ
ವಿಷವನಿತ್ತಗೆ ಸಿಹಿಯ ನೀಡಿರಿ
ಯೆಂದು ಸಾರುವ ಬೋಧನ ॥ 4 ॥

— ಜಿ ಗಾಂಸ್ಕರ್
ಬಾಗಿನಕಟ್ಟಿ

★

ಕಾರುಣ್ಯ ಗೋವು

ಕಾರುಣ್ಯ ತೋರೊ ತಾಯೇ, ಓ ಜಗಜ್ಜನನಿ ನೀ
ಕರುಣಾಕಟಾಕ್ಷವ ತೋರು ಎನಗೆ ಓ ಗೋಮಾತೆ ನೀ
ನಿನ್ನನು ನಂಬಿ ಬದುಕಿದರಮ್ಮಾ
ನಿನ್ನನು ಪೂಜಿಸಿ ಕೃತಾರ್ಥರಾದರಮ್ಮಾ
ಜಗದ ಮಹಿಮೆ, ನಿನ್ನ ಹಿರಿಮೆ
ಪುಣ್ಯಕೆ ನೀವೆ, ಕರುಣಾನಿಧೇ
ದರಿದ್ರ ಮಾನವಗೆ ತೋರು ತಾಯೇ
ಪರಮ ಲೀಲಾವಮಯೆ, ತಾಯೇ ॥

— ಗಣಪತಿ ಡಿ ಭಟ್
ಚಿಮ್ಮಲ್ಲಿ

★

ಹೆಂಡತಿಯ ಮೂಗು ಕೆತ್ತರಿಸಿದ

ಭದ್ರಾಚಲ— ನರಸಾಪುರದ ಒಬ್ಬ ಗಾಮಸ್ಥನು 6 ವರ್ಷಗಳ ಹಿಂದೆ ಸಂತತಿ ಹರಣ ಚಿಕಿತ್ಸೆ ಮಾಡಿಸಿಕೊಂಡ ; ಈಗ ಅವನ ಹೆಂಡತಿ ಗರ್ಭಣಿಯಾಗಿರುವದನ್ನು ಕಂಡ ಅವನಿಗೆ ಆವಳ ಪತಿಭಕ್ತಿ ಬಗ್ಗೆ ಸಂಶಯ ಬಂದಿತು ; ಅವಳ ಮೂಗು, ಕಿವಿಗಳು, ತುಟಿಗಳು, ಸ್ತನಗಳನ್ನು, ಕತ್ತರಿಸಿ ಓಡಿ ಹೋದ. ಪೋಲೀಸರು ತನಿಖೆ ನಡೆಸುತ್ತಿದ್ದಾರೆ

★

ಮೌನ ಮೆರವಣಿಗೆ

ಮೈಸೂರು— ಬಳಕೆದಾರರ ಸೊಸೈಟಿಗಳ ಪ್ರತಿನಿಧಿಗಳು ತಮ್ಮ ಕೇಳಿಕೆ ನೆರವೇರಲು ತಾ ॥ 16 ರಂದು ಮೌನ ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಧರಣ ನಡೆಸಲು ಯೋಚಿಸಿರುವರು.

★

ನ್ಯಾಯಬೆಲೆ

ನವದೆಹಲಿ — ಅಡಳಿತಗಾರರು ಮತ್ತು ತಯಾರಿಕೆಗಾರರು ನಿಷ್ಕರ್ಷಿಸಿದ ಬೆಲೆಗೆ ನ್ಯಾಯಬೆಲೆ ಅಂಗಡಿಗಳೂ, ಬೆಲ್ಲದರೆ ಅಂಗಡಿಗಳೂ ಮಾರುತ್ತಿಲ್ಲವೆಂದು ಭಾರತ ಬೆಳೆಕೆದಾರರ ಸಮಿತಿ ಅಭಿಸ್ರಾಯಪಟ್ಟಿದೆ

★

ಉಪಾಧ್ಯಾಯರಿಂದ ಬಹಿಷ್ಕಾರ

ಬೆಂಗಳೂರು— ತಾ ॥ 17 ರಿಂದ ಪ್ರಾರಂಭಿಸಬೇಕಾಗಿರುವ ಎಸ್ಸೆಸ್ಸೆಲ್ಸಿ ಪರೀಕ್ಷಾ ಉತ್ತರ ಪತ್ರಿಕೆಗಳ ಪರಿಶೀಲನೆ ಕಾರ್ಯವನ್ನು ರಾಜ್ಯದ 5000 ಕ್ಕೂ ಹೆಚ್ಚು ಪ್ರೌಢಶಾಲಾ ಉಪಾಧ್ಯಾಯರು, ತಮ್ಮ 11 ಪಾಯಿಂಟ್ ಕೇಳಿಕೆ ನೆರವೇರಲು, ಬಹಿಷ್ಕರಿಸಿದ್ದಾರೆ.

★

ಸೇರ್ಪಡೆ

ನವದೆಹಲಿ — ಕಮ್ಯೂನಿಸ್ಟೇತರ 7 ಪಕ್ಷಗಳ ನಾಯಕರ ಸಭೆ ಆ ಪಕ್ಷಗಳೆಲ್ಲಾ ಒಟ್ಟುಗೂಡಿ ಹೊಸ ಪಕ್ಷ ಸ್ಥಾಪಿಸಲು ನಿರ್ಧರಿಸಿದೆ.

ಮುಖ್ಯ ಮಂತ್ರಿಗಳ ನುಡಿ

ಬೆಂಗಳೂರು— ಚಿಕ್ಕ ಪತ್ರಿಕೆಗಳ ಸಂಬಂಧವಾದ ಪರಾರಂಭದಲ್ಲಿ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್‌ರವರು ಮಾಡಿದ ಭಾಷಣದಲ್ಲಿ, ಪತ್ರಿಕೆಗಳ ಉತ್ತಮತೆಗೆ ಹಲವು ಸಲಹೆಗಳನ್ನು ನೀಡಿದರು.

★

ಭ್ರಷ್ಟಾಚಾರ ಅನ್ಯಾಯ ವಿರುದ್ಧ

ನವದೆಹಲಿ— " ಪ್ರಜಾಪ್ರಭುತ್ವಕ್ಕೆ ಪ್ರಜೆಗಳು " ಸಂಸ್ಥೆಗೆ ಶ್ರೀ ಜಯಪ್ರಕಾಶ ನಾರಾಯಣರು ಸರ್ವಾನುಮತದಿಂದ ಚುನಾಯಿಸಲ್ಪಟ್ಟಿದ್ದಾರೆ – ಭ್ರಷ್ಟಾಚಾರ ಮತ್ತು ಅನ್ಯಾಯ ವಿರುದ್ಧ ಹೋರಾಡುವ ಸಂಸ್ಥೆ ಇದು.

★

ಪ್ರವಾಸಿಗರಿಗೆ ಪೋಲೀಸರು ಕಾದಿದ್ದಾರೆ

ಶ್ರೀಲಂಕಾ ಸ್ಥಳೀಯ ಪತ್ರಿಕೆಗಳಲ್ಲಿ ಸ್ಕ್ಯಾಂಡಿನೋವಿಯಾ ಪ್ರವಾಸಿಕರು ವಧುಗಳಿಗಾಗಿ ಜಾಹಿರಾತು ಪ್ರಕಟಿಸಿದರು – ಅನೇಕ ವಧುಗಳು ಉತ್ತರಿಸಿರುವರು – ಅವರನ್ನು ಹಿಡಿಯಲು ಪೋಲೀಸರು ಸಿದ್ಧಗೊಂಡಿದ್ದಾರೆ.

ದಿವ್ಯವಾಣಿ

ಕರೆಯಲ್ಪಡದೆ ಹೋಗಬೇಡ, ಕರೆಸಿದಾಗ ಮಾತ್ರ ಹೋಗು.

— ಬಾಲತಸಾರ್ ಗ್ರೀಷಿಯನ್

" ಕಾಳಸಂತೆಕಾರ ಹಟಾವೊ "

ಹಾವಣಗೆರೆ — ಇಂದಿನ ಘೋಷಣೆ " ಇಂದಿರಾ ಹಟಾವೊ " ಬದಲು " ಕಾಳಸಂತೆಕೋರ ಹಟಾವೊ " ಎಂದಿರಬೇಕೆಂದು ಕಮ್ಯುನಿಸ್ಟ್ ಪಾರ್ಟಿ ಕಾರ್ಯದರ್ಶಿ ಶ್ರೀ ಎಸ್. ಎ. ಡಾಂಗೆಯವರು ಕರ್ನಾಟಕ ಹತ್ತಿ ಗಿರಣಿ ಸಮ್ಮೇಳನ ಉದ್ಘಾಟಿಸಿದ ನಂತರ, ಪ್ರಚಂಡ ಸಭೆಯಲ್ಲಿ ಹೇಳಿದರು – ದೇಶದ ನಿಜವಾದ ಶತ್ರುಗಳು ಕಾಳಸಂತೆಕೋರರು ಮತ್ತು ದಾಸ್ತಾನುಗಾರರು ಎಂದು ಅವರು ಹೇಳಿದರು

○

ಪವಿತ್ರ ಗಂಗಾ ಸ್ನಾನ

ಹರಿದ್ವಾರ— 12 ವರ್ಷಗಳ ನಂತರ ನಿನ್ನೆ ಆಚರಿಸಲಾದ ಕುಂಭ್‌ದಲ್ಲಿ ಹರಿದ್ವಾರದ ಎಲ್ಲಾ ಘಟ್ಟಗಳಲ್ಲಿಯೂ ದೇಶಾದ್ಯಂತದ 4 ಮಿಲಿಯ ಜನರು ಪವಿತ್ರ ಗಂಗಾ ಸ್ನಾನ ಮಾಡಿದರು – ಹಾರ್ಕಿ ಪೌರಿಯಲ್ಲಿ 2 ಮಿಲಿಯ ಜನ ಸ್ನಾನಮಾಡಿದರು – ಏಳು ಧರ್ಮ ಕಟ್ಟಳೆ ಸಾಧುಗಳು ವರ್ಣರಂಜಿತ ಮೆರವಣಿಗೆಯಲ್ಲಿ ಹೋಗಿ ಸ್ನಾನ ಮಾಡಿದರು.

★

ಹಿಂದಿಗೆ ಬೆಂಬಲ

ನವದೆಹಲಿ— ಕೊಂಡಿ ಭಾಷೆ ಹಿಂದಿಗೆ ಪ್ರಗತಿಪರ ಉತ್ತೇಜನ ಮಾರ್ಗವಾಗಿ, ಅನೇಕ ಇಲಾಖೆ ಮತ್ತು ಸಚಿವಾಲಯಗಳಲ್ಲಿಯ ಇಲಾಖಾ ಪರೀಕ್ಷೆಗಳಲ್ಲಿ ಹಿಂದಿ ಐಚ್ಛಿಕ ಮಾಧ್ಯಮವಾಗಿರಲು ಅನುಮತಿಸಲಾಗಿದೆ.

●

ಕೇಂದ್ರ ಸರಕಾರದ ಅಜ್ಜಿಗೆ ತಿರಸ್ಕಾರ

ತಿರುವೆಂಡ್ರಂ – ಡಿಸೆಲ್ ಮಿಗಿಸಲು, ದೂರ ಮಾರ್ಗಗಳಲ್ಲಿ ಬಸ್ ಓಡಿಸದಿರಲು ಕೇಂದ್ರ ಕೊಟ್ಟ ಸೂಚನೆಯನ್ನು ಕೇರಳ ಸರಕಾರ ತಿರಸ್ಕರಿಸಿದೆ.

★

1292 ಮೆಡಲುಗಳು

ನವದೆಹಲಿ— ತೆಹರಾನಿನಲ್ಲಿ ಸೆಪ್ಟಂಬರು 1 ರಿಂದ 16 ರವರೆಗೆ ನಡೆಯುವ 7 ನೇ ಏಷ್ಯಾ ಕ್ರೀಡೆಗಳಲ್ಲಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಮೆಡಲಾಗಳು ಒಟ್ಟು 1292 ಮೆಡಲುಗಳು ಕೊಡಲಾಗುವುದು.

ಪವಿತ್ರ ತೀರ್ಥಸ್ನಾನ

ಹರಿದ್ವಾರ— ಶನಿವಾರ ವೈಶಾಖಿಯಂದು ದೇಶದ ವಿವಿಧ ಭಾಗದ 3 ಮಿಲಿಯ ಹಿಂದೂ ಭಕ್ತರು ಪವಿತ್ರ ಗಂಗಾ ಸ್ನಾನ ಮಾಡಿದರು.

ಕಾಂಗ್ರೆಸ್ ಸರಕಾರವನ್ನು ತೆಗೆಯಬೇಕು

ನವದೆಹಲಿ– ಎಲ್ಲ ಭ್ರಷ್ಟಾಚಾರ ಮಾರ್ಗದಿಂದ ಅಂಟಿಕೊಂಡಿರಲು ಪ್ರಯತ್ನಿಸುತ್ತಿರುವ ಕಾಂಗ್ರೆಸ್ ಸರಕಾರವನ್ನು ಎತ್ತಿಹಾಕಲು ಕಾನೂನು ವಿರೋಧ ಮಾರ್ಗ ಅನುಸರಿಸುವ ಬಗ್ಗೆ ಬಿ. ಕೆ. ಡಿ. ಪಕ್ಷದ ಅಧ್ಯಕ್ಷ ಶ್ರೀ ಚರಣಸಿಂಗ್‌ರವರು ಅಪ್ರತ್ಯಕ್ಷವಾಗಿ ತಮ್ಮ ಬೆಂಬಲ ನೀಡಿರುವರು.

ರೇಷನ್‌ದಾರರಿಗೆ ಅರ್ಧ ಕಿಲೋ ಅಕ್ಕಿ

ಬೊಂಬಾಯಿ— ರೇಷನ್‌ಕಾರ್ಡುದಾರರಿಗೆ, ದೊಡ್ಡವರಿಗೆ ತಾ ॥ 16 ರಿಂದ ಪ್ರಾರಂಭವಾಗುವ ಅರ್ಧ ತಿಂಗಳಿಗೆ ಅರ್ಧ ಕಿಲೋ ಅಕ್ಕಿ ದೊರೆಯುವದು.

ಹಾಲುಪುಡಿ ಕಾರ್ಖಾನೆ

ಪ್ರೊಡಟೂರು– ನಂದಿಯಾಲ ಮತ್ತು ಪ್ರೊಡಟ್ಟೂರಿನಲ್ಲಿ ಎರಡು ಹಾಲುಪುಡಿ ಕಾರ್ಖಾನೆಗಳನ್ನು ಸ್ಥಾಪಿಸಲು ಅವಕಾಶವಿದೆ ಎಂದು ಹೇಳಲಾಗಿದೆ.

ದಿವ್ಯವಾಣಿ

ವಿಜಯವು ಬಹಿರಂಗ ವಿಚಾರ, ವಿಫಲತೆಯು ಖಾಸಗಿ ಶವಸಂಸ್ಕಾರ. – ರಸೆಲ್

ಭಾರತದಲ್ಲಿ ಗೋವಧೆ



ಪೂರ್ಣ ನಿಶೇಧವಾಗಲಿ

Protect the Cow

Help The Gorakshana

— HumanitarianPropoganda Monthly....

Contribute Liberally

to the National Defence Fund.

ವುಡ್‌ಲಾಂಡ್ಸ್ 12 4 74 ರಿಂದ

ಅಮೋಘ 3 ನೇ ವಾರ

ರಿ ಕ್ ಷಾ ವಾ ಲಾ

ಹಿಂದಿ ಕಲರ್ ಮಹೋನ್ನತ ಚಿತ್ರ ಸಂಗೀತ : ಎಸ್. ಡಿ. ಬರ್ಮನ್

ಪಾತ್ರ – ರಣಧೀರ್ ಕಪೂರ್ ನೀತು ಸಿಂಗ್ ಪ್ರಾಣ್ ಮಾಲಾಸಿನ್ಹಾ

ಅಪೇರಾ 12 4 74 ರಿಂದ

ಕರುಳಿನ ಕರೆ

ಪಾತ್ರ – ರಾಜಕುಮಾರ್ ಕಲ್ಪನ ಒಂದು ವಾರ ಮಾತ್ರ

ಅಮೋಘ ಕನ್ನಡ ಚಿತ್ರ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja puram Mysore